ಸಾಕ್ಷಿಯನ್ನು ದಿ: 05.12.2023 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ ಃ-**

1. ವಾದಿ ನಾವು ರಸ್ತೆ ಬಿಟ್ಟುಕೊಟ್ಟಿರುವುದಿಲ್ಲವೆಂದು ಈ ದಾವೆ ಸಲ್ಲಿಸಿರುತ್ತಾರೆ. ನನಗೆ ಸರ್ವೆ ನಂ.775/2 ರಲ್ಲಿ 2 ಎಕರೆ 32 ಗುಂಟೆ ಜಮೀನಿದ್ದು ಸದರಿ ಜಮೀನನ್ನು ಅನ್ಯಕ್ರಾಂತ ಮಾಡಿಸಿ ಸೈಟುಗಳಾಗಿ ಮಾರ್ಪಾಡು ಮಾಡಿ ಎಲ್ಲಾ ನಿವೇಶನಗಳನ್ನು ಈಗಾಗಲೇ ಮಾರಾಟ ಮಾಡಿರುತ್ತೇನೆ. ಸದರಿ ಜಮೀನು ನನ್ನ ಹಾಗೂ ಸಹೋದರ ಸಹೋದರಿಯರ ಹೆಸರಿನಲ್ಲಿ ಜಂಟಿಯಾಗಿ ದಾಖಲಾಗಿತ್ತು ಮತ್ತು ಅದು ನಮ್ಮ ಪಿತ್ರಾರ್ಜಿತ ಸ್ವತ್ತಾಗಿತ್ತು. ನಾನು ಸದರಿ ಜಮೀನನ್ನು 1992 ರಲ್ಲಿ ಅನ್ಯಕ್ರಾಂತ ಮಾಡಿಸಿರುತ್ತೇವೆ. ಸದರಿ ಜಮೀನಿನಲ್ಲಿ ಅನ್ಯಕ್ರಾಂತ ಮಾಡಿಸಿದ ಮೇಲೆ ಸುಮಾರು 3- 4 ರಸ್ತೆಗಳನ್ನು ಮಾಡಿರುತ್ತೇವೆ. ನಿಪಿ.1 ರ ಆಸ್ತಿಯ ದಕ್ಷಿಣ ದಿಕ್ಕಿಗೆ 18 ಅಡಿ ರಸ್ತೆಯಿದೆ ಎಂದು ಬರೆಸಿರುತ್ತೇನೆಂದರೆ ಸರಿ. ನಿಪಿ.1 ರ ಆಸ್ತಿಯ ಪೂರ್ವಕ್ಕೆಃ ಪಿ ಈರಪ್ಪ ವಕೀಲರ ನಿವೇಶನ, ಪಶ್ಚಿಮಕ್ಕೆಃ ನಮ್ಮ ಉಳಿಕೆ ಸೈಟುಗಳು, ಉತ್ತರಕ್ಕೆಃ ತೆಂಕಳ್ಳಿ ಮಾದಮ್ಮನವರ ಮಗ ಚಿಕ್ಕಣನವರ ನಿವೇಶನ, ದಕ್ಷಿಣಕ್ಕೆಃ ನಾವು ಬಿಟ್ಟಿರುವ 18 ಅಡಿ ರಸ್ತೆ. ಸದರಿ 18 ಅಡಿ ರಸ್ತೆಗೆ ಸಂಬಂದಪಟ್ಟಂತೆ ಯಾವುದೇ ನಕಾಶೆ ಇರುವುದಿಲ್ಲ. ಸದರಿ ದಕ್ಷಿಣದ 18 ಅಡಿ ರಸ್ತೆಯ ದಕ್ಷಿಣಕ್ಕೆ ಮಾದೇಗೌಡರ ಹೆಂಡತಿ ಲಕ್ಷ್ಮಮ್ಮನ ನಿವೇಶನ ಇರುತ್ತದೆ. ಸದರಿ ಲಕ್ಷ್ಮಮ್ಮನಿಗೆ ಮಾರಾಟ ಮಾಡಿದ ಕ್ರಯಪತ್ರ ಹಾಜರು ಪಡಿಸಲು ನನಗೆ ತೊಂದರೆಯಿಲ್ಲ. ನಿಪಿ.1 ರ ಆಸ್ತಿಯ ಪಶ್ಚಿಮ ದಿಕ್ಕಿನಲ್ಲಿರುವ ನಿವೇಶನವನ್ನು ಜಯಮ್ಮನಿಗೆ ಮಾರಾಟ ಮಾಡಿರುತ್ತೇವೆ. ಜಯಮ್ಮನ ನಿವೇಶನದ ದಕ್ಷಿಣ ದಿಕ್ಕಿಗೂ ಸಹ 18 ಅಡಿ ರಸ್ತೆ ಬರುತ್ತದೆ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ